ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮೂಲಭೂತ ಸೌಲಭ್ಯ

635(779), ಶ್ರೀ ಕುಮಾರಸ್ವಾಮಿ ಎಚ್.ಕೆ. (ಸಕಲೇಶಪುರ)

ಅ) ಹಾಸನ ಜಿಲ್ಲೆ ಆಲೂರು ಪಟ್ಟಣ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು ಈಗಿರುವ ಕಟ್ಟಡ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಕಾಗದಿರುವುದು ಹಾಗೂ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೆಚ್ಚುವರಿ ಕಟ್ಟಡಗಳನ್ನು ಹಾಗೂ ಮೂಲಭೂತ ಸೌಕರ್ಯಗಳಾದ ನೀರು, ಶೌಚಾಲಯ, ಗ್ರಂಥಾಯ ಇನ್ನಿತರ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ತರಗತಿ ಕೊಠಡಿ ನಿರ್ಮಾಣಕ್ಕಾಗಿ ₹ 100.00 ಲಕ್ಷ ಹಾಗೂ ಶೌಚಾಲಯ ನಿರ್ಮಿಸಲು ರೂ.5.00 ಲಕ್ಷ ಮಂಜೂರು ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸ್ಥಳೀಯ ಜಿಲ್ಲಾ ಪಂಚಾಯತ್ ಸದಸ್ಯರ ಅನುದಾನದಿಂದ ಕೊಳವೆ ಬಾವಿ ಕೊರೆಯಿಸಿ ವಿದ್ಯಾರ್ಥಿಗಳಿಗೆ ನೀರಿನ ಪೂರೈಕೆ ಮಾಡಲಾಗಿದೆ.

ಗ್ರಾಮ ಪಂಚಾಯತಿ ದಾಖಲೆಯಲ್ಲಿ ಇಲ್ಲದಿರುವ ಜಾಗದಲ್ಲಿ ಕಟ್ಟಡ ನಿರ್ಮಾಣ

636(780), ಶ್ರೀ ಕುಮಾರಸ್ವಾಮಿ ಎಚ್.ಕೆ. (ಸಕಲೇಶಪುರ)

ಅ) ಹಾಸನ ಜಿಲ್ಲೆ ಸಕಲೇಶಪುರ ಮಳಲಿ ಗ್ರಾಮದಲ್ಲಿ ಸರ್ವೆ ನಂ. 277/05 ರ ಜಾಗವು ರಾಷ್ಟ್ರೀಯ ಹೆದ್ದಾರಿ–75ಕ್ಕೆ ಹೊಂದಿಕೊಂಡಿದ್ದು ಪಂಚಾಯತ್‌ನಲ್ಲಿ ಸದರಿ ಜಾಗದಲ್ಲಿ ಯಾವುದೇ ದಾಖಲಾತಿ ಇಲ್ಲದೇ

ಇದ್ದರೂ ಕೂಡ ಮಳಲಿ ಗ್ರಾಮ ಪಂಚಾಯತ್ ವತಿಯಿಂದ ಖಾಸಗಿ ವ್ಯಕ್ತಿಗೆ ಕಟ್ಟಡ ಕಟ್ಟಲು ಪರವಾನಿಗೆ ಹಾಗೂ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕಟ್ಟಡವನ್ನು ಯಾವಾಗ ತೆರವುಗೊಳಿಸಲಗುವುದು ಹಾಗೂ ಪರವಾನಿಗೆಯನ್ನು ಯಾವಾಗ ರದ್ದುಪಡಿಸಲಾಗುವುದು?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) ಮಳಲಿ ಗ್ರಾಮ ಪಂಚಾಯತಿಯಿಂದ ಮಳಲಿ ಗ್ರಾಮದ ಸರ್ವೆ ನಂ. 277/05 ರಾಷ್ಟ್ರೀಯ ಹೆದ್ದಾರಿ 75ಕ್ಕೆ ಹೊಂದಿಕೊಂಡಂತಿರುವ 10 ಗುಂಟೆ ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ, ಖಾತೆದಾರರಾದ ಶ್ರೀ ಕೆ.ಎ.ಸಲೀಂ ಬಿನ್ ಕೆ. ಅಬ್ದುಲ್ಲಾ, ಕೊಲ್ಲಹಳ್ಳಿ ಗ್ರಾಮ ರವರಿಗೆ ದಿನಾಂಕ:17.08.2013 ರಂದು ನೀಡಿರುವ ಕಟ್ಟಡದ ಪರವಾನಿಗೆಯನ್ನು ದಿನಾಂಕ:11.02.2014 ರಂದು ತಿಳುವಳಿಕೆ ಪತ್ರ ನೀಡಿ ದಿನಾಂಕ:18.02.2014ರಲ್ಲಿ ದಿನಾಂಕ:23.05.2014 ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯದಂತೆ ರದ್ದುಪಡಿಸಿದೆ.

ಈ ಭೂಮಿಯು ಶ್ರೀ ಕೆ.ಎ.ಸಲೀಂ ಬಿನ್ ಕೆ. ಅಬ್ದುಲ್ಲಾ, ಕೊಲ್ಲಹಳ್ಳಿ ಗ್ರಾಮ ರವರಿಗೆ ಸೇರಿದ ಸ್ವಂತ ಹಿಡುವಳಿ ಭೂಮಿಯಾಗಿದ್ದು, ಮಳಲಿ ಗ್ರಾಮ ಪಂಚಾಯತಿಯ ಗ್ರಾಮಠಾಣಾ ವ್ಯಾಪ್ತಿಗೆ ಬರುವುದಿಲ್ಲ. ಸದರಿ ಕಟ್ಟಡವು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುತ್ತದೆ.

ವಿದ್ಯುತ್ ಸಂಪರ್ಕ ಪಡೆಯಲು ನೀಡಿದ್ದ, ನಿರಾಪೇಕ್ಷಣಾ ಪತ್ರವನ್ನು ದಿನಾಂಕ:13.06.2014ರಂದು ರದ್ದುಪಡಿಸಿದೆ ಮತ್ತು ವಿದ್ಯುತ್ ಸಂಪರ್ಕ ನೀಡಬಾರದಾಗಿ ಚೆಸ್ಕಾಂ ಸಕಲೇಶಪುರ ಇವರಿಗೆ ತಿಳುವಳಿಕೆ ಪತ್ರ ನೀಡಿದೆ.